ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ: **01.06.2026**

**ಮುಖ್ಯ ವಿಚಾರಣೆ:- ಶ್ರೀ ಡಿಕೆಎಂ ವಾದಿಯ ಪರ ವಕೀಲರಿಂದ**

ನಾನು ನ್ಯಾಯಾಲಯದಿಂದ ಆಯುಕ್ತರಾಗಿ ನೇಮಕವಾಗಿದ್ದು ದಾವಾ ಸ್ವತ್ತನ್ನು ಅಳತೆ ಮಾಡಿ ವರದಿಯನ್ನು ಮತ್ತು ಇತರೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದು ಅವುಗಳಲ್ಲಿ ವಾದ ಪತ್ರವನ್ನು ನಿಸಿ-6 ಎಂದು, ಸೂಚನವಳಿಗಳನ್ನು ನಿಸಿ-7, 8 ಎಂದು, ಪಹಣಿಯನ್ನು ನಿಸಿ-9 ಎಂದು, ವರದಿಗಳನ್ನು ನಿಸಿ-10, 11 ಎಂದು, ನಕಲು ಕ್ರಯ ಪತ್ರವನ್ನು ನಿಸಿ-12 ಎಂದು, ಕಾನೂನು ಸಲಹೆಗಾರರು ನೀಡಿರುವ ನಕಲುದಾಖಲೆಯನ್ನು ನಿಸಿ-13 ಎಂದು, ನಮೂನೆ-3ರ ನಕಲು ದಾಖಲೆಯನ್ನು ನಿಸಿ-14 ಎಂದು, ನಗರ ಯೋಜನ ಸಹಾಯಕರ ನಕಲು ದಾಖಲೆಯನ್ನು ನಿಸಿ-15 ಎಂದು, ನಗರ ಯೋಜನ ಇಲಾಖೆಯವರು ನೀಡಿರುವ ನಕಲು ದಾಖಲಾತಿಯನ್ನು ನಿಸಿ-16 ಎಂದು, ಕಟ್ಟಡ ಪರವಾನಿಗೆ ನಕಲು ದಾಖಲೆಯನ್ನು ನಿಸಿ-17 ಎಂದು , ನಕಲು ಕಚ್ಚಾನಕಾಶೆಯನ್ನು ಮತ್ತು ಫೋಟೋವನ್ನು ನಕಲು ನಿಸಿ-18 ಎಂದು, ಸಹಾಯಕ ಕಾರ್ಯ ಪಾಲಕ ಅಭಿಯಿಂತರರು ನೀಡಿರುವ ನಕಲು ದಾಖಲೆಯನ್ನು ನಿಸಿ-19 ಎಂದು, ನಕಲು ಕಟ್ಟಡದ ಪರವಾನಿಗೆಯನ್ನು ನಿಸಿ-20 ಎಂದು, ಸ್ಥಳ ಮಹಜರ್ ನ್ನು ನಿಸಿ-21 ಎಂದು, ಮೂರು ನಕ್ಷೆಗಳನ್ನು ನಿಸಿ-22 ರಿಂದ 24 ಎಂದು ಗುರುತಿಸಲಾಯಿತು.

-

**ಪಾಟೀಸವಾಲು: ವಾದಿ ಪರ ವಕೀಲರಿಂದ:**

1ನೇ ಪ್ರತಿವಾದಿಯ ಮನೆಯನ್ನು ಅಳತೆ ಮಾಡಿದ್ದು ನಿಸಿ-23 ರಲ್ಲಿ ತೋರಿಸಿದ್ದು ಅದರ ಪ್ರಕಾರ ಸದರಿಯವರು 15.70/15.85 ವಿಸ್ತೀರ್ಣದಲ್ಲಿ 10/10 ವಿಸ್ತೀರ್ಣಕ್ಕೆ ಮನೆ ಕಟ್ಟಿದ್ದು ಪೂರ್ವಕ್ಕೆ: 1.65ಮೀಟರ್, ಪಶ್ಚಿಮ: 0.45 ಮಿ, ಉತ್ತರ: 4.4 ಮಿ, ದಕ್ಷಿಣ: 1.7 ಮಿ ಬಿಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿಯವರು ಕಟ್ಟಡದ ಅನುಮೋದನೆ ದಾಖಲೆಯನ್ನು ಪಡೆದಿರುಬಹುದು ಆದರೆ ಸದರಿ ದಾಖಲೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ನಾವು ವಾದಿ ಮತ್ತು ಪ್ರತಿವಾದಿಗಳ ಸ್ವತ್ತನ್ನು ಅಳತೆ ಮಾಡಿರುತ್ತೇವೆ. ವಾದಿಗೆ ಸೇರಿದ 8 ಗುಂಟೆಯನ್ನು ಸಂಪೂರ್ಣವಾಗಿ ಅಳತೆ ಮಾಡಿರುವುದಿಲ್ಲ, ಆದರೆ ಮನೆ ಮತ್ತು ಅದರ ಸುತ್ತ ಇರುವ ಖಾಲಿ ಜಾಗವನ್ನು ಕಾಂಪೌಂಡ್ ನ್ನು ಅಳತೆ ಮಾಡಿರುತ್ತೇವೆ.

ನಿಸಿ-22 ರಿಂದ 24 ನ್ನು ನಾವು ಕಛೇರಿಯಲ್ಲಿ ತಯಾರು ಮಾಡಿರುತ್ತೇವೆ ಎಂದರೆ ಸರಿ. ಸದರಿ ದಾಖಲೆಗಳಲ್ಲಿ ಸದರಿ ನಕ್ಷೆಗಳನ್ನು ತಯಾರು ಮಾಡಿದ ದಿನಾಂಕ ನೋಂದಾಣಿ ಮಾಡಿಲ್ಲ ಎಂದರೆ ಸರಿ. ಅಳತೆ ಮಾಡಲು ಹೋದಾಗ

ಕರಡು ನಕ್ಷೆಯನ್ನು ತಯಾರು ಮಾಡಿಕೊಂಡಿದ್ದೇವು. ಅದಕ್ಕೆ ವಾದಿ ಪ್ರತಿವಾದಿಗಳ ಸಹಿಯನ್ನು ಪಡೆದಿರುವುದಿಲ್ಲ. ನಿಸಿ-22 ರಿಂದ 24 ದಾಖಲೆಗಳಿಗೆ ವಾದಿ ಮತ್ತು ಪ್ರತಿವಾದಿಯ ಸಹಿಯನ್ನು ಪಡೆದಿರುವುದಿಲ್ಲ. ನಕ್ಷೆಯಲ್ಲಿ ತೋರಿಸಿರುವುದಕ್ಕಿಂತ ಹೆಚ್ಚಿನ ವಿಸ್ತೀರ್ಣದಲ್ಲಿ 1ನೇ ಪ್ರತಿವಾದಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಸ್ವತ್ತಿನ ದಕ್ಷಿಣಕ್ಕೆ ಒಂದು ರಸ್ತೆ ಇದ್ದು, ಅದರ ಅಗಲದಲ್ಲಿ ವ್ಯತ್ಯಾವಿರುತ್ತದೆ. ಸದರಿ ರಸ್ತೆ ಒಂದರ ಕೊನೆಯಲ್ಲಿ 10ಮಿ, ಇನ್ನೊಂದು ಕೊನೆಯಲ್ಲಿ 9.7ಮಿ ಅಗಲ ಇದೆ.

ದಕ್ಷಿಣ ಕಡೆಯಲ್ಲಿ ಪ್ರತಿವಾದಿಯರು ರಸ್ತೆಯ ಕಡೆಯಾದಂತೆ 1.7 ಮೀಟರ್ ನ್ನು ಖಾಲಿ ಬಿಟ್ಟಿರುತ್ತಾರೆ. 8 ಗುಂಟೆ ಪ್ರದೇಶ ಪ್ರತಿವಾದಿಯ ಮನೆಗೆ ಲಗತ್ತಾಗಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ವಾದಿಗೆ ಸೇರಿದ ಎಲ್ಲಾ ಸ್ವತ್ತನ್ನು ಅಳತೆ ಮಾಡಿದ್ದರೆ 1ನೇಪ್ರತಿವಾದಿ ವಾದಿಗೆ ಸೇರಿದ ಎಷ್ಟು ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ತಿಳಿದುಬರುತ್ತದೆ ಎಂದರೆ ಸಾಕ್ಷಿಯು ನಾವು ಮತ್ತು ಎಡಿಎಲ್.ಆರ್ ರವರು ಒಟ್ಟಾಗಿ ಪರಿಶೀಲನೆ ಮಾಡಬೇಕು ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳ ಅಳತೆಯನ್ನು ನಾವು ಮತ್ತು ಎಡಿಎಲ್.ಆರ್ ರವರು ಒಟ್ಟಾಗಿ ಮಾಡಿರುವುದಿಲ್ಲ ಪ್ರತ್ಯೇಕವಾಗಿ ಮಾಡಿರುತ್ತೇವೆ ಎಂದರೆ ಸರಿ.

1ನೇ ಪ್ರತಿವಾದಿಯು ವಾದಿಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿದ್ದರು ಸಹ ಅದನ್ನು ಸರಿಯಾಗಿ ಅಳತೆ ಮಾಡಿರುವುದಿಲ್ಲ ಎಂದರೆ ಪಕ್ಷಗಾರರ ಸೂಚನವಳಿಯಂತೆ ಅಳತೆ ಮಾಡಿ ವರದಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಗಳು ನೀಡಿದ ಸೂಚನವಳಿಯನ್ನು ಸರಿಯಾಗಿ ಅನುಸರಿಸದೇ ಅಳತೆ ಮಾಡಿ ವರದಿ ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿಯು ಸೂಚನವಳಿಯ ಎಲ್ಲಾ ಸೂಚನವಳಿಗಳನ್ನು ಪಾಲಿಸಿ ಅಳತೆ ಮಾಡಿ ವರದಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ವಸ್ತುಸ್ಥಿತಿಯಂತೆ ಅಳತೆ ಮಾಡದೇ ವರದಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಸಹಾಯ ಮಾಡಲು ಅಳತೆ ಕಾರ್ಯವನ್ನು ಸರಿಯಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಪಕ್ಷಗಾರರ ಸೂಚನವಳಿಯಂತೆ ಅಳತೆ ಮಾಡಿ ವರದಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಮರುವಿಚಾರಣೆ: ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

Cw-2

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ